ಅ) ಪತಿ: ಪತ್ನಿ ಇಬ್ಬರೂ ಸರ್ಕಾರಿ ನೌಕರರಾಗಿದಲ್ಲಿ ಮಾತ್ರ ವರ್ಗಾವಣೆಗೆ ಪರಿಗಣಿಸುತ್ತಿರುವುದರಿಂದ ಉಂಟಾಗುತ್ತಿರುವ ತೊಂದರೆಯ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ದಂಪತಿಯಲ್ಲೊಬ್ಬರು ಖಾಸಗಿ ಉದ್ಯೋಗದಲ್ಲಿ ಇರುವ ಪ್ರಕರಣಗಳಲ್ಲಿ ತೊಂದರೆಗೆ ಈಗಾದವರಿಗೆ ಅನುಕೂಲವಾಗುವಂತೆ ನಿಯಮಾವಳಿಯನ್ನು ತಿದ್ದುಪಡಿ ಮಾಡಲಾಗುವುದೇ?

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಯವರು):

ಅ) ಹೌದು.

ಆ) ಪರಿಶೀಲಿಸಲಾಗುತ್ತಿದೆ.

ಪೀಣ್ಯ ಎರಡನೇ ಹಂತಕ್ಕೆ ಹೋಗುವ ರಸ್ತೆ ದುರಸ್ಥಿ

2099 (2502) - ಶ್ರೀ ಜಿ.ಎಸ್. ನಂಜುಂಡಸ್ವಾಮಿ (ಕೊಳ್ಳೇಗಾಲ): ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರಿನ ಕಂಠೀರವ ಸ್ಟುಡಿಯೋ ಹತ್ತಿರದ ರಿಂಗ್ ರೋಡ್‌ನಿಂದ ಪೀಣ್ಯ ಎರಡನೇ ಹಂತಕ್ಕೆ ಹೋಗುವ ರಸ್ತೆಯು ತುಂಬಾ ಹಾಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ, ರಸ್ತೆ ದುರಸ್ತಿಪಡಿಸಲು ಕೈಗೊಂಡಿರುವ ಕ್ರಮಗಳೇನು?

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಯವರು):

ಅ) ಹೌದು.

ಆ) ಈ ರಸ್ತೆಯು 2.50 ಕಿ.ಮೀ ಇದ್ದು, ಇದರ ದುರಸ್ತಿಗಾಗಿ 33.00 ಲಕ್ಷ ರೂ.ಗಳ ಅಂದಾಜಿನಲ್ಲಿ ಗುತ್ತಿಗೆ ಸ್ವೀಕರಿಸಿದ್ದು, ಇಷ್ಟರಲ್ಲೇ ಕೈಗೊಳ್ಳಲಾಗುವುದು.

ಕೊಳ್ಳೇಗಾಲ ಬೆಂಗಳೂರು ನಡುವೆ ಬಸ್ ವ್ಯವಸ್ಥೆ

2100 (2503) - ಶ್ರೀ ನಂಜುಂಡಸ್ವಾಮಿ ಜಿ.ಎಸ್. (ಕೊಳ್ಳೇಗಾಲ): ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೊಳ್ಳೇಗಾಲದಲ್ಲಿ ಬಸ್ ಡಿಪೋ ನಿರ್ಮಿಸಿರುವುದು ಸರಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ ಗ್ರಾಮಾಂತರ ಪ್ರದೇಶಗಳ ಜನರ ಅನುಕೂಲಕ್ಕೆ ವಾಹನ ಸೌಲಭ್ಯ ಒದಗಿಸಲು ಸರಕಾರ ಕೈಗೊಂಡಿರುವ ಕ್ರಮ ಏನು;

ಇ) ಕೊಳ್ಳೇಗಾಲ ಬೆಂಗಳೂರು ರಾಷ್ಟ್ರೀಯ ಹೆದ್ದಾರಿಯಲ್ಲಿ ಕೊಳ್ಳೇಗಾಲ-ಬೆಂಗಳೂರು ಮಧ್ಯೆ ಸುವಿಹಾರಿ ಬಸ್ ಒದಗಿಸಲು ಸರಕಾರ ಕೈಗೊಂಡಿರುವ ಕ್ರಮ ಏನು?

ಶ್ರೀ ಬಿ. ರಮಾನಾಥ ರೈ (ಮಾನ್ಯ ಸಾರಿಗೆ ಸಚಿವರು):

ಅ) "ಹೌದು"

ಆ) ಕೊಳ್ಳೇಗಾಲ ಕ್ಷೇತ್ರವು ಭಾಗಶಃ ರಾಷ್ಟ್ರೀಕೃತವಲ್ಲದ ವಲಯದಲ್ಲಿರುತ್ತದೆ. ಕೊಳ್ಳೇಗಾಲ-ಬೆಂಗಳೂರು ಮತ್ತು ಚಾಮರಾಜನಗರ ರಾಷ್ಟ್ರೀಕೃತ ವಲಯದಲ್ಲಿದ್ದು ಈ ಮಾರ್ಗಗಳಲ್ಲಿ

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ವತಿಯಿಂದ ಸಾರಿಗೆ ಸೌಲಭ್ಯ ಒದಗಿಸಲಾಗಿದೆ. ಉಳಿದ ಮಾರ್ಗಗಳು ರಾಷ್ಟ್ರೀಕೃತವಲ್ಲದ ವಲಯದಲ್ಲಿದ್ದು ಖಾಸಗಿ ವಾಹನಗಳು ಕಾರ್ಯಾಚರಣೆಯಲ್ಲಿರುತ್ತವೆ.

ಅ) ಏಪ್ರಿಲ್ 2003 ರಲ್ಲಿ ಕೊಳ್ಳೇಗಾಲ ಬೆಂಗಳೂರು ಮಾರ್ಗದಲ್ಲಿ ಸುವಿಹಾರಿ ವಾಹನವನ್ನು ಪ್ರಾಯೋಗಿಕವಾಗಿ ಆಚರಣೆ ಮಾಡಲು ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು.

ತರೀಕೆರೆಯಲ್ಲಿ ಪೊಲೀಸ್ ಕಛೇರಿಯ ಕಟ್ಟಡ ಪ್ರಾರಂಭಿಸುವುದು

2101 (2368) - ಶ್ರೀ ಬಿ.ಆರ್. ನೀಲಕಂಠಪ್ಪ (ತರೀಕೆರೆ): ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತರೀಕೆರೆ ತಾಲ್ಲೂಕಿನ ತರೀಕೆರೆಯಲ್ಲಿ ಸರ್ಕಲ್ ಇನ್ಸ್‌ಪೆಕ್ಟರ್ ಕಛೇರಿಯ ಕಟ್ಟಡ ಹಾಗೂ ಲಕ್ಕವಳ್ಳಿ ಮತ್ತು ಅಜ್ಜಂಪುರ ಪೊಲೀಸ್ ಠಾಣೆ ಕಟ್ಟಡಗಳನ್ನು ಕಟ್ಟಲು ಶಂಕು ಸ್ಥಾಪನೆಯಾಗಿ ಒಂದು ವರ್ಷಕ್ಕೂ ಜಾಸ್ತಿ ಅವಧಿ ಕಳೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಈ ಕಟ್ಟಡಗಳನ್ನು ಯಾವಾಗ ಕಟ್ಟಲು ಶುರು ಮಾಡಲಾಗುವುದು

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಸಚಿವರು):

ಅ) ಹೌದು.

ಆ) ತರೀಕೆರೆ ವೃತ್ತ ಕಛೇರಿ ಕಟ್ಟಡ ನಿರ್ಮಾಣದ ಕಾಮಗಾರಿಯನ್ನು ಕೈಗೊಳ್ಳಲು ಟೆಂಡರ್‌ಗಳನ್ನು ಕೈಗೊಳ್ಳಲು ಟೆಂಡರ್‌ಗಳನ್ನು ಕರೆದು ಅರ್ಹತೆಯ ಮೇಲೆ ಗುತ್ತಿಗೆದಾರರನ್ನು ನೇಮಿಸಿಕೊಳ್ಳುವ ಕಾರ್ಯ ಪ್ರಗತಿಯಲ್ಲಿದ್ದು ಕೂಡಲೇ ಗುತ್ತಿಗೆದಾರರಿಗೆ ಕಾಮಗಾರಿಯನ್ನು ಕೈಗೊಳ್ಳಲು ವಹಿಸಲಾಗುವುದು. ಲಕ್ಕವಳ್ಳಿ ಮತ್ತು ಅಜ್ಜಂಪುರ ಪೊಲೀಸ್ ಠಾಣೆ ಕಟ್ಟಡದ ಕಾಮಗಾರಿಗಳ ಅಂದಾಜು ವೆಚ್ಚ ಪಟ್ಟಿಗೆ ಆಡಳಿತಾತ್ಮಕ ಅನುಮೋದನೆ ನೀಡಿದ್ದು. ಜಮೀನು ವಿವಾದದ ತೊಡಕಿನಿಂದ ಕಟ್ಟಡಗಳ ಕಾಮಗಾರಿಯನ್ನು ಕೈಗೊಳ್ಳುವ ಕೆಲಸ ವಿಳಂಬವಾಗಿದ್ದು ಈಗ ಸದರಿ ಪೊಲೀಸ್ ಠಾಣೆಗಳಿಗೆ ಕಟ್ಟಡಗಳನ್ನು ನಿರ್ಮಿಸಲು ಟೆಂಡರ್‌ಗಳನ್ನು ಕರೆಯುವ ಕಾರ್ಯಪ್ರಗತಿಯಲ್ಲಿರುತ್ತದೆ. ಶೀಘ್ರದಲ್ಲೇ ಈ ಕಟ್ಟಡಗಳ ನಿರ್ಮಾಣ ಕಾಮಗಾರಿಯನ್ನು ಗುತ್ತಿಗೆದಾರರಿಗೆ ವಹಿಸುವ ಮೂಲಕ ನಿರ್ಮಿಸಲಾಗುವುದು.

ತರೀಕೆರೆ ಪುರಸಭೆಯಲ್ಲಿ 25 ಲಕ್ಷ ರೂಗಳ ಕಳಪೆ ಕಾಮಗಾರಿ

2102 (2369) - ಶ್ರೀ ಬಿ.ಆರ್. ನೀಲಕಂಠಪ್ಪ (ತರೀಕೆರೆ): ಮಾನ್ಯ ಪೌರಾಡಳಿತ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತರೀಕೆರೆ ಪುರಸಭೆ ವ್ಯಾಪ್ತಿಯಲ್ಲಿ 25 ಲಕ್ಷ ರೂ.ಗಳ ಹುಡ್ಕೋ ಕಾಮಗಾರಿಯು ಕಳಪೆಯಾಗಿದ್ದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಈ ನಿಟ್ಟಿನಲ್ಲಿ ಸರ್ಕಾರ ಕೈಗೊಂಡ ಕ್ರಮವೇನು?

ಇ) ಹಾಗೂ ಈ ಕಾಮಗಾರಿಗಳನ್ನು ಯಾವಾಗ ಪೂರ್ಣಗೊಳಿಸಲಾಗುವುದು?

ಶ್ರೀ ಕುಮಾರ್ ಬಂಗಾರಪ್ಪ (ಪೌರಾಡಳಿತ ರಾಜ್ಯ ಸಚಿವರು):

ಅ) ಹೌದು.

ಆ) ಕಾಮಗಾರಿಗಳ ಗುಣಮಟ್ಟ ಉತ್ತಮಪಡಿಸಲು ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ ಅಭಿಯಂತರರು ಮೇಲ್ವಿಚಾರಣೆ ಮಾಡುತ್ತಿರುತ್ತಾರೆ ಹಾಗೂ